1. ಸೀಗೆಹಳ್ಳಿ ಗ್ರಾಮದಲ್ಲಿ ನೀಡಿರುವ ಪ್ರದೇಶವು ಕಸ ಸಂಸ್ಕರಣೆ ಕಾರ್ಯಕ್ಕೆ ಕಡಿಮೆಯಾಗಿರುವುದರಿಂದ ಡಂಪಿಂಗ್ ಯಾರ್ಡ್ ನಿರ್ಮಿಸಲಾಗುವುದಿಲ್ಲ.

2. ಗಿಡ್ಡೇನಹಳ್ಳಿಯ ಪ್ರದೇಶವು ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದಲ್ಲಿರುವುದರಿಂದ ಡಂಪಿಂಗ್ ಯಾರ್ಡ್ ನಿರ್ಮಿಸಲಾಗುವುದಿಲ್ಲ.

3. ಮೇಡಿ ಅಗ್ರಹಾರ ಪ್ರದೇಶವು ಅಭಿವೃದ್ಧಿಯಾಗುತ್ತದೆ ಹಾಗೂ ವಿಮಾನ ನಿಲ್ದಾಣಕ್ಕೆ ಸಮೀಪದಲ್ಲಿರುವುದರಿಂದ ಡಂಪಿಂಗ್ ಯಾರ್ಡ್ ನಿರ್ಮಿಸಲಾಗುವುದಿಲ್ಲ.

4. ಕನ್ನಹಳ್ಳಿ ಸೇರಿದಂತೆ ಪಾಲಿಕೆಯು ಈಗಾಗಲೇ ಕೊತ್ತನೂರು ಗ್ರಾಮದ ಕ್ಯಾಲನೋನಹಳ್ಳಿ 43 ಎಕರೆ ಪ್ರದೇಶ ಗುರುತಿಸಿದ್ದು ಈ ಎರಡು ಪ್ರದೇಶಗಳಿಗೆ ಕಸ ಸಂಸ್ಕರಣದ ಕರಡು ಯೋಜನೆಯನ್ನು ಸಿದ್ದಪಡಿಸಿದ್ದು ಸಧ್ಯದಲ್ಲಿ ಖಾಸಗಿ ಸಂಸ್ಥೆಗಳ ಹಣ ಹೂಡಿಕೆಯ ಟೆಂಡರ್‌ನ್ನು ಕರೆಯಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ ವಸತಿ ಸಂಕೀರ್ಣದಲ್ಲಿ ಇತರರ ವಾಸ

1626 (881) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ತನ್ನ ಸಿಬ್ಬಂದಿಗಳಿಗಾಗಿ ನಿರ್ಮಿಸಿರುವ ವಸತಿ ಸಂಕೀರ್ಣಗಳು ಎಷ್ಟು? ಅವು ಯಾವುವು?

ಆ) ಈ ವಸತಿ ಸಂಕೀರ್ಣದಲ್ಲಿ ಪಾಲಿಕೆ ಸಿಬ್ಬಂದಿಗಳೇ ವಾಸವಾಗಿದ್ದರೆಯೋ ಅಥವಾ ಬೇರೆಯವರು ವಾಸವಾಗಿದ್ದಾರೆಯೇ ಮಾಹಿತಿ ನೀಡುವುದು?

ಇ) ವಿಕ್ಟೋರಿಯಾ ಬಡಾವಣೆಯಲ್ಲಿ ನಿರ್ಮಿಸಿರುವ ಪಾಲಿಕೆ ವಸತಿ ಸಂಕೀರ್ಣದಲ್ಲಿ ಸಿಬ್ಬಂದಿಗಳಲ್ಲದೆ ಬೇರೆಯವರು ವಾಸವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ನಿರ್ಮಾಣ ಕಾಮಗಾರಿ ಮುಗಿದು 6 ತಿಂಗಳು ಕಳೆದರೂ ಸರ್ಕಾರ ಈ ವಸತಿ ಸಂಕೀರ್ಣವನ್ನು ತನ್ನ ವಶಕ್ಕೆ ತೆಗೆದುಕೊಳ್ಳದೇ ಇರಲು ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಒಟ್ಟು 39 ವಸತಿ ಸಂಕೀರ್ಣಗಳನ್ನು ಈ ಕೆಳಗಿನಂತೆ ಇರುತ್ತದೆ.

ಆಸ್ಟಿನ್ ಟೌನ್	- 2	ಕೋದಂಡರಾಮಪುರ	-1
ಕೋಡಿಹಳ್ಳಿ	- 5	ಮಲ್ಲೇಶ್ವರಂ	-1
ಕದಿರಯ್ಯನಪಾಳ್ಯ	- 7	17 ನೇ ಅಡ್ಡರಸ್ತೆ	
ಮಿಷನ್ ರಸ್ತೆ	- 3	ದಯಾನಂದ ನಗರ	-1
ವಿಲಿಯಮ್ಸ್ ರಸ್ತೆ	- 2	ಶ್ರೀರಾಮಪುರ	-1
ಭಾರತಿ ನಗರ	- 1	ಜಕ್ಕರಾಯನಕೆರೆ	-1
ಗವಿಪುರಂ	- 2	ಒಕಳೀಪುರಂ	-1
ಗುಟ್ಟಹಳ್ಳಿ		ಶೇಷಾದ್ರಿಪುರಂ ಹಳೇ	-1

ಮೋತಿನಗರ		ಸವಾರ್ ಲೇನ್	
ಕಲಾಸಿ ಪಾಳ್ಯಂ	- 1	ಮಾಗಡಿ ರಸ್ತೆ,	-5
ಸ್ಮಿತಿ ಬ್ಲಾಕ್		1ನೇ ಅಡ್ಡರಸ್ತೆ	
ಕುಂಬಾರಗುಂಡಿ	- 1	ಸುಬ್ರಮಣ್ಯನಗರ	-4

ಅ) ಈ ವಸತಿ ಗೃಹಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ವರ್ಗದವರೇ ವಾಸವಾಗಿರುತ್ತಾರೆ. "ನೆಹರು ಪುರಂ ವಸತಿ" ಸಂಕೀರ್ಣದಲ್ಲಿ ಆರ್ಥಿಕವಾಗಿ ಹಿಂದುಳಿದವರು ಅನಧಿಕೃತವಾಗಿ ಸೇರಿಕೊಂಡಿದ್ದು, ಇವರನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ವಿಕ್ಟೋರಿಯಾ ಬಡಾವಣೆಯಲ್ಲಿ ಯಾವುದೇ ವಸತಿ ಗೃಹಗಳಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಹುಣಸೂರು ಪಟ್ಟಣಕ್ಕೆ ಕಾವೇರಿ ನೀರು

1628 (1951) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಣಸೂರು ಪಟ್ಟಣಕ್ಕೆ ಸರಬರಾಜಾಗುತ್ತಿರುವ ಲಕ್ಷ್ಮಣ ತೀರ್ಥ ನದಿಯು ಕಲುಷಿತವೆಂದು ಸರ್ಕಾರವೇ ಪರಿಗಣಿಸಿರುವುದರಿಂದ ಕೆ.ಆರ್. ನಗರದ ಕಾವೇರಿ ನದಿಯಿಂದ ಹುಣಸೂರು ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಮಂಜೂರಾತಿಗೆ ತಡವಾಗಲು ಕಾರಣವೇನು?

2) ಈ ಯೋಜನೆಗೆ ಪ್ರಸ್ತಾವನೆಯಲ್ಲಿರುವ ಅಂದಾಜು ವೆಚ್ಚ ವೆಷ್ಟು?

3) ಕಳೆದ ಎರಡು ವರ್ಷಗಳಿಂದಲೂ ಅಂದಾಜು ಪಟ್ಟಿ ಸರ್ಕಾರದ ಮುಂದಿದ್ದು, ಈ ವರ್ಷವಾದರೂ ಅದಕ್ಕೆ ಒಪ್ಪಿಗೆ ನೀಡಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

1) 1997-98ನೇ ದರಪಟ್ಟಿಗನುಗುಣವಾಗಿ ರೂ. 1350.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿತ್ತು. ಆದರೆ ಮುಖ್ಯಾಧಿಕಾರಿಗಳು, ಪುರಸಭೆ, ಹುಣಸೂರುರವರ ಪತ್ರದ ಸಂಖ್ಯೆ 1 ದಿನಾಂಕ 25.4.1998 ರಲ್ಲಿ ಕಾವೇರಿ ನದಿಯನ್ನು ಮೂಲವಾಗಿಸಿಕೊಂಡು ತಯಾರಿಸಿದ ರೂ. 1350.00 ಲಕ್ಷಗಳ ಅಂದಾಜು ಪಟ್ಟಿ ಬಹಳ ದುಬಾರಿಯಾಗಿರುತ್ತದೆಂದು ಇದಕ್ಕೆ ಬದಲು ಹುಣಸೂರು ಲಕ್ಷ್ಮಣ ತೀರ್ಥ ನದಿಯಿಂದ ನೀರು ಸರಬರಾಜು ವ್ಯವಸ್ಥೆಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರಿಸಲು ಕೇಳಿಕೊಂಡ ಪ್ರಕಾರ, ಈ ಪ್ರಸ್ತಾವನೆಯನ್ನು ಕೈಬಿಡಲಾಯಿತು.

ನಂತರ, ಹುಣಸೂರು ವಿಧಾನ ಸಭಾ ಕ್ಷೇತ್ರದ ಶಾಸಕರು ಹಾಗೂ ಪುರಸಭೆಯವರು ಪುನಃ ಜೀವನದಿಯಾದ ಕಾವೇರಿ ನದಿಯಿಂದ ಶಾಶ್ವತ ನೀರು ಸರಬರಾಜು ಯೋಜನೆಯ ಅಂದಾಜನ್ನು ತಯಾರಿಸಲು ಕೋರಿಕೊಂಡ ಮೇರೆಗೆ ಹಾಲ್ತಿ ದರಪಟ್ಟಿಗನುಗುಣವಾಗಿ ರೂ. 1825.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಲಾಗಿದೆ. ಇದಕ್ಕೆ ಪುರಸಭೆಯವರು ಮೇಲು ಸಹಿ ಮಾಡಿ ಠರಾವನ್ನು ಸಲ್ಲಿಸಿರುತ್ತಾರೆ. ಈ ಅಂದಾಜನ್ನು ಐ.ಎಸ್.ಓ ಹಾಗೂ ಎಂ.ಐ.ಎಸ್.ಗಳಿಗುಣವಾಗಿ ಮಾರ್ಪಡಿಸಲಾಗುತ್ತಿದೆ. ಈ ಬಗ್ಗೆ ಅಂದಾಜನ್ನು ತಯಾರಿಸಲಾಗುತ್ತಿದೆ.

2) ಅಂದಾಜು ಮೊತ್ತ ರೂ. 1825.00 ಲಕ್ಷಗಳು.

3) ಪರಿಶೀಲನೆಯಲ್ಲಿದೆ.